# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ, ದಿನಾಂಕ:28-01-2019ರ ನಡವಳಿಗಳು

**ವಿಷಯದ ಸಂಖ್ಯೆ: ವಾಕಾಸ್ಥಾಸ/280/2018-19**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ರವರ ವ್ಯಾಪ್ತಿಯ ವಾರ್ಡ್-06 ಥಣಿಸಂದ್ರ ಕ್ಕೆ ಲೆಕ್ಕ ಶೀರ್ಷಿಕೆ ಪಿ-1771 ಅಡಿ ಪ್ರಸ್ತಾಪಿಸಿದ 16ಕಾಮಗಾರಿಗಳ ಕ್ರಿಯಾಯೋಜನೆಗೆ ಸ್ಥಾಯಿ ಸಮಿತಿ ನಡವಳಿಗೆ ಸಂಖ್ಯೆ:ವಾಕಾಸ್ಥಾಸ/690/2017-18, ದಿನಾಂಕ:03-01-2018ರಲ್ಲಿ ಸಮಿತಿಯು ಅನುಮೋದನೆ ನೀಡಿರುತ್ತಾರೆ. ಅನುಮೋದಿತ ಕಾಮಗಾರಿಯಲ್ಲಿ ಸದರಿ ವಾರ್ಡ್‌ನ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸ | ಕಾಮಗಾರಿ ಹೆಸರು | ಪಿ.ಕೋಡ್ | ಜಾಬ್ ಸಂಖ್ಯೆ | ಅಂದಾಜು ಮೊತ್ತ ರೂ ಲಕ್ಷಗಳಲ್ಲಿ |
|---|---|---|---|---|
| 1 | Pothole filling to roads in ward No.06 Thnaisandra surrounding area Byararayanpura sub division | 1771 | 06-18-000083 | 30.00 |

ಮೇಲ್ಕಾಣಿಸಿದ ಕಾಮಗಾರಿಯನ್ನು ಘನ ಉಚ್ಚ ನ್ಯಾಯಲಯದಲ್ಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಬಿದ್ದಿರುವ ರಸ್ತೆ ಗುಂಡಿಗಳ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಯುತ್ತಿದ್ದು, ಘನ ನ್ಯಾಯಾಲಯವು ದಿನಾಂಕ:19-10-2018 ಮತ್ತು 20-10-2018 ರಂದು ಸುಧೀರ್ಘವಾಗಿ ವಿಚಾರಣೆ ನಡೆಸಿ ಘನ ನ್ಯಾಯಾಲಯವು ಎಲ್ಲಾ 198 ವಾರ್ಡ್‌ಗಳಲ್ಲಿ ಹಾಲಿ ಇರುವ ಮತ್ತು ಹೊಸದಾಗಿ ಗುರುತಿಸಿರುವ ರಸ್ತೆ ಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಲು ಕ್ರಮವಹಿಸಿ ಆದೇಶ ನೀಡಿರುತ್ತಾರೆ. ಮುಂದುವರೆದಂತೆ ವಿಶೇಷ ಆಯುಕ್ತರು (ಯೋಜನೆ)ರವರ ಕಛೇರಿ ಸಂಖ್ಯೆ:ವಿ.ಆ.(ಯೋ)ಪಿ.ಆರ್/1562/2018-19 ದಿನಾಂಕ:20-09-2018 ರ ಅಡಿಯಲ್ಲಿ ಆಂತರಿಕ ಕಚೇರಿ ಟಿಪ್ಪಣಿ ಹೊರಡಿಸಿ ಪಾಲಿಕೆ ಪ್ರತಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ಹಾಲಿ ಇರುವ ಮತ್ತು ಹೊಸದಾಗಿ ಗುರುತಿಸಿರುವ ರಸ್ತೆ ಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಿ ಹಾಗು ಯಾವುದೇ ಗುಂಡಿ ಮುಚ್ಚುವ ಕಾರ್ಯವು ಬಾಕಿ ಇರುವುದಿಲ್ಲವೆಂದು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಧೃಡೀಕರಿಸಿ ಪತ್ರ ನೀಡಲು ಸೂಚಿಸಲಾಗಿರುತ್ತದೆ.

ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಹಾಗೂ ಮುಖ್ಯ ಅಭಿಯಂತರರು (ಯಲಹಂಕ) ರವರ ಶಿಫಾರಸ್ಸಿನಂತೆ ಮೇಲ್ಕಂಡ ಕಾಮಗಾರಿಯನ್ನು ಕರ್ನಾಟಕ ಪಾರದರ್ಶಕ ಕಾಯ್ದೆ ಅಡಿ ಕಲಂ 4(ಜಿ)ಅಡಿ ವಿನಾಯಿತಿ ನಿರೀಕ್ಷಿಸಿ ಸದರಿ ಕಾಮಗಾರಿಯನ್ನು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆರವರಿಗೆ ವಹಿಸಿ ಕಾಮಗಾರಿಯನ್ನು ಪೂರ್ಣಗೊಳಿಸಿರುವ ಕ್ರಮವನ್ನು ಸ್ಥರೀಕರಿಸಲು ಕೋರಿದ್ದು, ಸದರಿ ಪ್ರಸ್ತಾವನೆಗೆ ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ (ಸಂಗ್ರಹಣೆ ಕೋಶ) ಆದೇಶ ಸಂಖ್ಯೆ:ಆಇ/344/ವೆಚ್ಚ-12/2018, ದಿನಾಂಕ:06-04-2018 ರಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್- ಹಿಂದಿನ ಕೆ.ಎಲ್.ಎ.ಸಿ) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2018-19ನೇ ಸಾಲಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ. ಈ ವಿಚಾರದಲ್ಲಿ ಮಾನ್ಯ ಆಯುಕ್ತರು ಕಛೇರಿ ಟಿಪ್ಪಣಿ ಸಂಖ್ಯೆ:1075/2018-19, ದಿನಾಂಕ;11-07-2018ರಂತೆ ಪಾಲಿಕೆಯ ವತಿಯಿಂದ 2018-19ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದ ಕಾಮಗಾರಿಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ

ಅನುಮೋದನೆ ಪಡೆದು ತದನಂತರ ಸರ್ಕಾರದ ಆರ್ಥಿಕ ಇಲಾಖೆಯವರು ನೀಡಿರುವ ಷರತ್ತುಗಳಿಗೆ ನಿಯಮಾನುಸಾರವಾಗಿ ಕ್ರಮವಹಿಸಿ ಮೆ:ಕೆ.ಆರ್.ಐ.ಡಿ.ಎಲ್. ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ್–06 ಥಣಿಸಂದ್ರದಲ್ಲಿ ಮೇಲ್ಕಾಣಿಸಿದಂತೆ ಪ್ರಸ್ತಾಪಿಸಿದ ಕಾಮಗಾರಿಯ ಅಂದಾಜು ಮೊತ್ತವಾದ ರೂ:30.00 ಲಕ್ಷಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಕಾಮಗಾರಿಯ ಪೂರ್ಣಗೊಳಿಸಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ ಕೋರಿ ಮಂಡಿಸಲು ಮಾನ್ಯ ಆಯುಕ್ತರು ಸಂಖ್ಯೆ:ಪಿ.ಎಸ್.ಆರ್.(ಜಿ)3944/2018–19, ದಿನಾಂಕ:05–11–2018 ರಂತೆ ಅನುಮೋದಿಸಿರುವ ಮೇರೆಗೆ ಪ್ರಧಾನ ಅಭಿಯಂತರರವರ ಕಛೇರಿ ಸಂಖ್ಯೆ:4481/2018–19, ದಿ:24–11–2018 ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಪ್ರಧಾನ ಅಭಿಯಂತರರವರ ದಿನಾಂಕ:29–11–2018ರ ಟಿಪ್ಪಣಿ.

ಸಾರಾಂಶ: ಪ್ರಧಾನ ಅಭಿಯಂತರರು ದಿನಾಂಕ: 29/11/2018 ಟಿಪ್ಪಣಿಯಲ್ಲಿರುವ ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಕೈಗೊಳ್ಳಲು ಅನುಮೋದಿಸಿದೆ.

ಅಧ್ಯಕ್ಷರು
ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

| ಕ್ರ ಸಂ | ಶ್ರೀಯುತರ ಹೆಸರು | ಪದನಾಮ | ನಿರ್ಣಯದ ಪರವಾಗಿ ಸಹಿ |
|---|---|---|---|
| 1 | ಉಮೇಸಲ್ಮಾ | ಅಧ್ಯಕ್ಷರು | |
| 2 | ದೀಪಿಕಾ.ಎಲ್.ಮಂಜುನಾಥರೆಡ್ಡಿ | ಸದಸ್ಯರು | Deepika. L. Manjunath Reddy |
| 3 | ಎಂ.ಶಾಮಲ | ಸದಸ್ಯರು | M. Shamala |
| 4 | ಇಂದಿರಾ.ಜಿ | ಸದಸ್ಯರು | Gundilla |
| 5 | ಜಯಲಕ್ಷ್ಮಮ್ಮ ಪಿಳ್ಳಪ್ಪ | ಸದಸ್ಯರು | ಜಯಲಕ್ಷ್ಮಮ್ಮ |
| 6 | ಶ್ರೀಲತ ಸಿ.ಜಿ.ಗೋಪಿನಾಥರಾಜು | ಸದಸ್ಯರು | Sri Latha |
| 7 | ಕೆ.ದೇವದಾಸ | ಸದಸ್ಯರು | K Devadas |
| 8 | ನೇತ್ರಾವತಿ ಕೃಷ್ಣೇಗೌಡ | ಸದಸ್ಯರು | Nethravathi |
| 9 | ಶಿಲ್ಪ ಅಭಿಲಾಶ್ | ಸದಸ್ಯರು | |
| 10 | ಎನ್.ಮಂಜುನಾಥ್ | ಸದಸ್ಯರು | N. Manjunath |
| 11 | ಆರ್.ಪದ್ಮಾವತಿ ಅಮರನಾಥ್ | ಸದಸ್ಯರು | Padmavathi. R |